'ಕೃಷ್ಣನ್ ಅವರ ಅಕೌಂಟ್‌ನಿಂದ ನೀವೇ ಹಣ ತೆಗೆದಿರಬೇಕು ಅದನ್ನು ಕೇಳಲು ಕರೆದಿದ್ದಾಗ, ಎಲ್ಲಿ ಬ್ಯಾಂಕ್‌ನವರಿಗೆ ಕಂಪ್ಲೇಂಟ್ ಕೊಟ್ಟು ಜೈಲಿಗೆ ಕಳುಹಿಸುತ್ತಾರೊ ಎಂದು, ಅವರನ್ನು ಕೊಲೆ ಮಾಡಿ, ಓಡಿ ಹೋಗಲು ಪ್ರಯತ್ನ ಮಾಡಿದ್ದಿರಿ. ದುರದೃಷ್ಟವಶಾತ್ ನಮ್ಮ ಕೈಗೆ ಸಿಕ್ಕಿಕೊಂಡಿರಿ.'

ಅಷ್ಟರಲ್ಲಿ ಫೋರೆನ್ಸಿಕ್‌ನವನು, 'ಸರ್, ಇನ್ನೊಂದು ಬುಲೆಟ್ ಸಿಕ್ಕಿದೆ...' ಎಂದು ಕೂಗಿದ.

ರಾಕೇಶ್ ಕುಳಿತಲ್ಲಿಯೇ ಕುಸಿದ. ಇನ್‌ಸ್ಪೆಕ್ಟರ್ ನಾಗೇಶ್ ಅಲ್ಲಿಗೆ ಹೋಗಿ ಬರುವಷ್ಟರಲ್ಲಿ ಸಾವರಿಸಿಕೊಂಡು, 'ಸರ್, ಇಲ್ಲೇನೋ ನನ್ನ ವಿರುದ್ಧ ಸಂಚು ನಡೆಯುತ್ತಿದೆ... ಯಾರೋ ನನ್ನನ್ನು ಸಿಕ್ಕಿ ಹಾಕಿಸಲು ಪ್ರಯತ್ನಿಸುತ್ತಿದ್ದಾರೆ. ಸಾವು ಸಂಭವಿಸಿದಾಗ ಇಲ್ಲಿ ಇದ್ದಿದ್ದು ನಾವಿಬ್ಬರೇ. ಅವರು ಸಾಯುವ ಮುಂಚೆಯೇ ನಿಮಗೆ ಫೋನ್ ಮಾಡಲಾಗಿತ್ತು... ಅಂದರೆ ನಾನಿಲ್ಲಿ ಬರುವುದು, ಕೃಷ್ಣನ್ ಸಾಯುವುದು ಯಾರಿಗೋ ಗೊತ್ತಿತ್ತು. ಅದು ನನ್ನ ಮೇಲೆ ಬರುವ ಹಾಗೆ ಪ್ಲಾನ್ ಮಾಡಿದ್ದಾರೆ...'

'ನಿಮ್ಮನ್ನು ಯಾರು ಸಿಗಿಸಲು ಪ್ರಯತ್ನ ಮಾಡ್ತಾರೆ? ನಾಟಕ ಸಾಕು... ಇಲ್ಲಿನ ಕೆಲಸ ಮುಗಿದ ತಕ್ಷಣ ನಿಮ್ಮನ್ನು ಅರೆಸ್ಟ್ ಮಾಡಬೇಕಾಗುತ್ತದೆ' ಎಂದ ನಾಗೇಶ್ ಗಂಭೀರವಾಗಿ.

'ಸರ್, ನಿಮಗೆ ನಾನು ಪೂರ್ತಿ ಸತ್ಯ ಹೇಳಿಲ್ಲ...' ರಾಕೇಶ್ ಒಂದೊಂದೇ ಮಾತುಗಳನ್ನು ಬಿಡಿ ಬಿಡಿಸಿ ಹೇಳಿದ.

'ನನಗೂ ಕೃಷ್ಣನ್ ಅವರ ಪತ್ನಿಗೂ ಕಳೆದ ಎರಡು ವರ್ಷಗಳಿಂದ ಸಂಬಂಧ ಇದೆ. ಕೆಲ ದಿನಗಳ ಹಿಂದೆ ಅವಳು ತನ್ನ ಪತಿಯೊಂದಿಗೆ ಮಾತಾಡಿ ಅವರೊಂದಿಗೆ ಡೈವೋರ್ಸ್ ಪಡೆಯುತ್ತೇನೆ ಅಂತಾ ಹೇಳಿದ್ದಳು. ಅದೇ ವಿಚಾರದಲ್ಲಿ ಮಾತಾಡಲು ನನ್ನನ್ನು ಕರೆಸಿದ್ದರು. ಬ್ಯಾಂಕ್‌ನಲ್ಲಿ, ಗ್ರಾಹಕರು ಕರೆದಿದ್ದಾರೆ ಎಂದು ಹೇಳಿ ಮಾತಾಡಲು ಬಂದಿದ್ದೆ' ತಲೆ ತಗ್ಗಿಸಿ ಒಂದೊಂದು ಶಬ್ದಗಳನ್ನೂ ಬಿಡಿಸಿ ಬಿಡಿಸಿ ಹೇಳತೊಡಗಿದ ರಾಕೇಶ್.

ಆಶ್ಚರ್ಯ ಪಡುವ ಸರದಿ ನಾಗೇಶನದಾಗಿತ್ತು. ಒಮ್ಮೆ ಕೃಷ್ಣನ್‌ನ ಪತ್ನಿಯ ಕಡೆ ನೋಡಿದ. ಅವಳಿಗೆ ಅರ್ಥವಾಯಿತೇನೋ ಎದ್ದು ಬಂದಳು. ಅವಳನ್ನು ಗಮನಿಸದ ರಾಕೇಶ್ ಮುಂದುವರೆಸಿದ.

'ಸರ್, ಡೈವೋರ್ಸ್ ಕೊಡಿ ಮದುವೆ ಆಗುತ್ತೇನೆ ಎಂದೆ. ಅವಳ ಖರ್ಚು ನಿನಗೆ ನಿಭಾಯಿಸಲು ಆಗಲ್ಲ, ನನ್ನನು ಚೆಸ್‌ನಲ್ಲಿ ಸೋಲಿಸು ನಿನಗೆ ಐದು ಕೋಟಿ ಕೊಡುತ್ತೇನೆ ಎಂದರು.'

'ಕತೆ ಕಟ್ಟುತ್ತಿದ್ದೀರಾ... ಯಾವುದೊ ಇಂಗ್ಲಿಷ್ ಸಿನಿಮಾದ ಕತೆ ಇದ್ದಂತೆ ಇದೆ...' ಗದರಿದ ನಾಗೇಶ್.

'ಚೆಸ್‌ನಲ್ಲಿ ನಾನು ಗೆದ್ದ ತಕ್ಷಣ ತಮ್ಮ ಬ್ಯಾಂಕ್‌ನಿಂದ ಹಣ ವರ್ಗಾವಣೆ ಮಾಡಿ ನಾನು ಇನ್ನು ನಿಮ್ಮ ಜೀವನದಲ್ಲಿ ಬರಲ್ಲ, ನಿಮ್ಮಿಬ್ಬರ ಮುಂದಿನ ಜೀವನ ಚೆನ್ನಾಗಿರಲಿ ಎಂದು ಗನ್‌ನಿಂದ ಶೂಟ್ ಮಾಡಿಕೊಂಡು ಸತ್ತರು. ಇಷ್ಟೇ ಆಗಿರೋದು... ಇದೇ ಪೂರ್ತಿ ಸತ್ಯ... ನೀವು ನನ್ನನ್ನು ಸಾಯಿಸಿದರೂ ನನ್ನ ಬಳಿ ಹೇಳಲು ಇರುವುದು ಇಷ್ಟೇ... ನನ್ನ ಖಾತೆಗೆ ಹಣ ವರ್ಗಾವಣೆ ಆಗಿರುವ ಮೆಸೇಜ್ ಕೂಡ ಬಂದಿದೆ ನೋಡಿ...' ತನ್ನ ಮೊಬೈಲ್‌ನಲ್ಲಿ ಬಂದಿದ್ದ ಮೆಸೇಜ್ ತೋರಿಸಿದ.

'ಇದು ನಿಮ್ಮ ಬ್ಯಾಂಕ್‌ನ ಅಕೌಂಟ್ ಅಲ್ಲವಲ್ಲ...'